# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ: ಆಲಮಟ್ಟಿ ಅಣೆಕಟ್ಟು ಪ್ರದೇಶ, ಆಲಮಟ್ಟಿ – 586 201, ತಾ॥ಬ.ಬಾಗೇವಾಡಿ, ಜಿ॥ವಿಜಯಪುರ
ಸಂಪರ್ಕ ಕಛೇರಿ: ಲೋಕೋಪಯೋಗಿ ಕಛೇರಿ ಪೂರಕ ಕಟ್ಟಡ, 3ನೇ ಮಹಡಿ, ಕೆ. ಆರ್. ವೃತ್ತ, ಬೆಂಗಳೂರು – 560001
ದೂರವಾಣಿ: 080–22244484 22277488, 22277393. ಟೆಲಿಫ್ಯಾಕ್ಸ್: 080–22219470 CIN:U85320KA1994SGC016101
ಜಾಲತಾಣ:www.kbjnl.karnataka.gov.in ಮಿಂಚಂಚೆ:edp@kbjnl.karnataka.gov.in

**31.12.2020 ರಲ್ಲಿದ್ದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿಯ ವರದಿ**

| ಕ್ರಮ ಸಂ. | ಯೋಜನೆಯ ಹೆಸರು | ಅಚ್ಚುಕಟ್ಟು ಕ್ಷೇತ್ರ (ಹೆ.) | ಇಲ್ಲಿಯವರೆಗೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾದ ಕ್ಷೇತ್ರ (ಹೆ.) ಡಿಸೆಂಬರ್–2020ರ ಅಂತ್ಯಕ್ಕೆ | ಪ್ರಗತಿಯ ವಸ್ತುಸ್ಥಿತಿ |
|---|---|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 & 2 | 6,22,023 | 6,20,000 | ಪೂರ್ಣಗೊಂಡಿದೆ. |
| 2 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 | 5,94,000 | 80,100 | ಕೃಷ್ಣಾ ಮೇಲ್ದಂಡೆ ಯೋಜನೆ (ಕೃ.ಮೇ.ಯೋ) ಹಂತ–3ರಡಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಗುಲಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿಯ ಒಟ್ಟು 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವುದಾಗಿರುತ್ತದೆ. ಕರ್ನಾಟಕ ಸರ್ಕಾರದ ಅನುಮೋದನೆಯಂತೆ ಕೃ.ಮೇ.ಯೋ. ಹಂತ–3ರಡಿಯ ಉಪಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕೃಷ್ಣಾ ಜಲವಿವಾದ ನ್ಯಾಯಾಧೀಕರಣ–2 (KWDT-II) ತೀರ್ಪು ಕುರಿತು ಭಾರತ ಸರ್ಕಾರದ ಅಧಿಸೂಚನೆಯನ್ನು ನಿರೀಕ್ಷಿಸಲಾಗಿದೆ ಹಾಗೂ ಅಂತರರಾಜ್ಯ ಜಲವಿವಾದ ನಾಯಾಧಿಕರಣ–2ವು ಕೃ.ಮೇ.ಯೋ.ಗಾಗಿ ಹಂಚಿಕೆ ಮಾಡಿರುವ 130 ಟಿಎಂಸಿ ನೀರು ಉಪಯೋಗಿಸುವ ಬಗ್ಗೆ ವಿಶೇಷ ರಜಾ ಅರ್ಜಿ ಹಾಗೂ ಇನ್ನಿತರ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪಿಗೆ ಒಳಪಟ್ಟಿರುತ್ತದೆ. ಇದಲ್ಲದೇ, ಕೃ.ಮೇ.ಯೋ. ಹಂತ–3 ರಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನುಗಳ ಭೂಸ್ವಾಧೀನತೆ ಮತ್ತು 20 ಗ್ರಾಮಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಒಳಗೊಂಡಿರುತ್ತದೆ. ಕೃ.ಮೇ.ಯೋ. ಹಂತ–3 ರಡಿ ಒಟ್ಟು 9 ಉಪ ಯೋಜನೆಗಳ ಅನುಷ್ಠಾನ ಕೈಗೊಳ್ಳಬೇಕಾಗಿದ್ದು, ಈಗಾಗಲೇ ಮುಳವಾಡ, ಚಿಮ್ಮಲಗಿ, ಇಂಡಿ, ರಾಂಪುರ, ಮಲ್ಲಾಬಾದ್, ಕೊಪ್ಪಳ ಹಾಗೂ ಹೇರಕಲ್ ಏತ ನೀರಾವರಿ ಯೋಜನೆಗಳು ಮತ್ತು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ್ ಉಪ ಯೋಜನೆಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಇದರ ಜೊತೆಗೆ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್‌ನಿರ್ಮಾಣ ಮತ್ತು ಪುನರ್ವಸತಿ, ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ ಹಾಗೂ ಬಾಗಲಕೋಟ ಪಟ್ಟಣದಡಿಯ ಪನರ್ವಸತಿ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು, ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಹೊಸ |

| | | | | |
|---|---|---|---|---|
| | | | | ಭೂಸ್ವಾಧೀನ ಕಾಯ್ದೆ, 2013 ರನ್ವಯ ಪ್ರಸಕ್ತ ಅನುಷ್ಠಾನಗೊಳಿಸುತ್ತಿರುವ ಯೋಜನೆಯಡಿಯ ಭೂಸ್ವಾಧೀನ ಹಾಗೂ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸಲು ಮುಳಗಡೆ ಹೊಂದುವ ಜಮೀನಿಗೆ ಏಕ ರೂಪ ದರ ನಿಗಧಿಪಡಿಸುವ ನಿಟ್ಟಿನಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ. |
| 3 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | 38,750 | 38,493 | ಯೋಜನೆಯ ಮೊದಲನೇ ಹಂತ ಪೂರ್ಣಗೊಂಡಿದ್ದು 14,493 ಹೆ. ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ ಹಾಗೂ ಪೂರ್ಣಗೊಂಡ ಕಾಲುವೆ ಜಾಲದಡಿ ನೀರು ಹರಿಬಿಡಲಾಗಿದೆ. ಯೋಜನೆಯ 2ನೇ ಹಂತದಡಿ ಬಾಗಲಕೋಟ ಜಿಲ್ಲೆ ಹುನಗುಂದ ತಾಲ್ಲೂಕಿನ 24,000 ಹೆ. ಕ್ಷೇತ್ರಕ್ಕೆ ಸಾಂಪ್ರದಾಯಿಕ ಕಾಲುವೆ ಜಾಲದ ಬದಲಾಗಿ ಹನಿ ನೀರಾವರಿ ಕಲ್ಪಿಸಲು 2 ಪ್ಯಾಕೇಜ್‌ಗಳಡಿ ಕೈಗೆತ್ತಿಕೊಂಡ ಯೋಜನಾ ಕಾಮಗಾರಿಗಳು ಪೂರ್ಣಗೊಂಡಿದ್ದು, 2017ನೇ ಸಾಲಿನ ಮುಂಗಾರು ಹಂಗಾಮಿನಿಂದ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದ್ದು ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಲಾಗಿರುತ್ತದೆ. |
| 4 | ತಿಮ್ಮಾಪುರ ಏತ ನೀರಾವರಿ ಯೋಜನೆ | 20,100 | 17,880 | ಯೋಜನೆಯು ಪೂರ್ಣಗೊಂಡಿದ್ದು, ಬಾಗಲಕೋಟೆ ತಾಲ್ಲೂಕಿನಡಿ 17,880 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. |
| 5 | ತೆಗ್ಗಿ-ಸಿದ್ದಾಪುರ ಏತ ನೀರಾವರಿ ಯೊಜನೆ | 3,000 | 3,000 | ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 3,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 6 | ರೊಳ್ಳಿ-ಮನ್ನಿಕೇರಿ ಏತ ನೀರಾವರಿ ಯೋಜನೆ | 2,450 | 2,350 | ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 2,350 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 7 | ಸನ್ನತಿ ಏತ ನೀರಾವರಿ ಯೋಜನೆ | 16,000 | 10,600 | ಯೋಜನೆಯಡಿ ಮೂಲತಃ ಭೀಮಾ ನದಿಗೆ ಅಡ್ಡಲಾಗಿ ಸನ್ನತಿ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ ಕೈಗೊಳ್ಳಲು ಯೋಜನೆ ರೂಪಿಸಲಾಗಿದ್ದು, ಈಗಾಗಲೇ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದ್ದು, ನೀರು ಸಂಗ್ರಹಿಸಲಾಗಿರುತ್ತದೆ ಹಾಗೂ ಮೂಲತ: ಬ್ಯಾರೇಜಿನಡಿ ಸಂಗ್ರಹಿಸಲಾದ ನೀರನ್ನು ರೈತರು ತಮ್ಮ ಸ್ವಂತ ಪಂಪ್‌ಸೆಟ್ ಬಳಸಿ ನೀರಾವರಿ ಸೌಲಭ್ಯ ಪಡೆದುಕೊಳ್ಳುವುದಾಗಿತ್ತು. ಭೀಮಾ ನದಿ ಪಾತ್ರದಡಿ ಸನ್ನತಿ ಯೋಜನೆಗೆ ಸ್ಕೀಂ-ಎ ರಡಿ ಹಂಚಿಕೆಯಾಗಿರುವ 4.00 ಟಿಎಂಸಿ ನೀರಿನ ಸಂಪೂರ್ಣ ಬಳಕೆ ಹಿನ್ನೆಲೆಯಲ್ಲಿ ಯೋಜನೆಯಡಿ ಸನ್ನತಿ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರವು 2005 ರಲ್ಲಿ ರೂ.188.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಸನ್ನತಿ ಏತ ನೀರಾವರಿ ಯೋಜನೆಯಲ್ಲಿ ಮುಖ್ಯ ಸ್ಥಾವರದ ಬಾಕಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಯೋಜನೆಯ ಕಾಲುವೆ ಜಾಲದಡಿ 1.75 ಕಿ.ಮೀ. ಉದ್ದದ ಫೀಡರ್ ಕಾಲುವೆ ಕಾಮಗಾರಿ ಪೂರ್ಣಗೊಂಡಿದೆ. ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 40.00, ಶಾಖಾ ಕಾಲುವೆ ಕಿ.ಮೀ. 0.00 ರಿಂದ 20.02, ವಿತರಣಾ ಕಾಲುವೆ ಸಂ.1 ಕಿ.ಮೀ. 0.00 ರಿಂದ 15.00 ಹಾಗೂ ಯರಗೋಳ ಮೈನರ್ ಕಾಲುವೆ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಪ್ರಸ್ತುತ ಪೂರ್ಣಗೊಂಡಿರುವ ಕಾಲುವೆ ಜಾಲದಡಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಕೆರೆಗಳು |

| | | | | |
|---|---|---|---|---|
| | | | | ತುಂಬಿಸುವುದು ಒಳಗೊಂಡಂತೆ ನೀರು ಹರಿಸಲಾಗಿರುತ್ತದೆ. ಸದರಿ ಯೋಜನೆಗೆ ಎ.ಐ.ಬಿ.ಪಿ. ಕೇಂದ್ರ ಸಹಾಯಧನ ಪಡೆಯಲು ರೂ.673.00 ಕೋಟಿ ಅಂದಾಜು ಮೊತ್ತದ ಯೋಜನಾ ವರದಿಗೆ ಕೇಂದ್ರ ಜಲ ಆಯೋಗವು ತೀರುವಳಿ ನೀಡಿರುತ್ತದೆ. ಇದಲ್ಲದೇ ಯೋಜನೆಗೆ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯವು "ಪರಿಸರ ತೀರುವಳಿ" ಸಹ ನೀಡಿರುತ್ತದೆ. |
| 8 | ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) | 15,250 | 14,718 | ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) ಕಿ.ಮೀ. 0.00 ರಿಂದ 29.15 ಹಾಗೂ ಅರಕೇರಾ ಶಾಖಾ ಕಾಲುವೆ ಕಿ.ಮೀ. 0.00 ರಿಂದ 22.00 ರವರೆಗಿನ ಲ್ಯಾಟರಲ್ ಕಾಮಗಾರಿಗಳು ಒಳಗೊಂಡಂತೆ ಪೂರ್ಣಗೊಂಡಿದ್ದು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಮುಂದುವರೆದು ಯೋಜನೆಯಡಿ ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 10.00 ಪೂರ್ಣಗೊಂಡಿದ್ದು ಕಿ.ಮೀ.10.00 ರಿಂದ 28.00 ರವರೆಗಿನ ಕಾಲುವೆ ಜಾಲದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಕಿ.ಮೀ.0.00 ರಿಂದ 10.00 ರಡಿಯ ಕಾಲುವೆ ಜಾಲಕ್ಕೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. |
| 9 | ನಂದವಾಡಗಿ ಏತ ನೀರಾವರಿ ಯೋಜನೆ | 36,100 | 0 | ಯೋಜನೆಗೆ ಸರ್ಕಾರವು ದಿನಾಂಕ:01.03.2014 ರಲ್ಲಿ ರೂ.1530.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಪ್ರಸ್ತುತ ನಂದವಾಡಗಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದ ಟರ್ನ್ ಕೀ ಆಧಾರದ ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಗಳನ್ನು 3 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡು ಕಾಮಗಾರಿ ಪ್ರಗತಿಯಲ್ಲಿದೆ. |
| 10 | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ | 20,243 | 0 | ಯೋಜನೆಗೆ ಸರ್ಕಾರವು ದಿನಾಂಕ:20.07.2016 ರಲ್ಲಿ ರೂ.840.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ 20,243 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗೆ ಅಂದಾಜು ಪತ್ರಿಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಹಂತದಲ್ಲಿದೆ. |
| 11 | ನಾಗರಬೆಟ್ಟ ಏತ ನೀರಾವರಿ ಯೋಜನೆ | 3,200 | 0 | ಯೋಜನೆಗೆ ಸರ್ಕಾರವು ದಿನಾಂಕ:12.09.2017 ರಲ್ಲಿ ರೂ.170.70 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗೆ ಕರೆಯುವ ಹಂತದಲ್ಲಿದೆ. |
| 12 | ಚಡಚಣ ಏತ ನೀರಾವರಿ ಯೋಜನೆ | 9,215 | 0 | ಯೋಜನೆಗೆ ಸರ್ಕಾರವು ದಿನಾಂಕ:29.08.2016 ರಲ್ಲಿ ರೂ.413.20 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ |

| | | | | |
|---|---|---|---|---|
| | | | | ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿ ಪ್ರಥಮ ಬಾರಿಗೆ ಉದ್ದೇಶಿತ 9,215 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪೈಪ್ ಲೈನ್ ಜಾಲದ ಕಾಮಗಾರಿಯು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಇದಲ್ಲದೇ ಸದರಿ ಯೋಜನೆಗೆ ಬೇಕಾಗುವ ನೀರನ್ನು ಸಂಗ್ರಹಿಸಲು ಬ್ಯಾರೇಜನ್ನು ಉಮ್ರಾಣಿ ಹತ್ತಿರ ನಿರ್ಮಿಸುವ ಕಾಮಗಾರಿಗೆ ಟೆಂಡರ್ ಆಧಾರದ ಮೇಲೆ ಗುತ್ತಿಗೆ ವಹಿಸುವ ಹಂತದಲ್ಲಿದೆ. |
| 13 | ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ | 6,100 | 0 | ಯೋಜನೆಗೆ ಸರ್ಕಾರವು ದಿನಾಂಕ:08.11.2017 ರಲ್ಲಿ ರೂ.238.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಟರ್ನಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗೆ ಕರೆಯುವ ಹಂತದಲ್ಲಿದೆ. |
| 14 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | 700 | 0 | ಯೋಜನೆಗೆ ಸರ್ಕಾರವು ದಿನಾಂಕ:12.09.2017 ರಲ್ಲಿ ರೂ.35.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಟರ್ನಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗೆ ಟೆಂಡರ್ ಕರೆಯುವ ಹಂತದಲ್ಲಿದೆ. |
| | **ಒಟ್ಟು** | **13,87,131** | **7,87,141** | |

31.12.2020ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ ಸ್ವೀಕರಿಸಲಾದ/ಇತ್ಯರ್ಥವಾದ/ಬಾಕಿ ಉಳಿದ ಹೂಡಿಕೆದಾರರ ಕುಂದುಕೊರತೆಗಳ ವಿವರ (ನಮ್ಮ ನೋಂದಣಿ ಹಾಗೂ ವರ್ಗಾವಣೆ ಏಜೆಂಟರ ವರದಿಯಂತೆ ಮತ್ತು ಕಂಪನಿಯಲ್ಲಿ ಲಭ್ಯವಿರುವ ಮಾಹಿತಿ)

| 01.10.2020 ರಲ್ಲಿದ್ದಂತೆ ಬಾಕಿ | ತ್ರೈಮಾಸಿಕದಲ್ಲಿ ಸ್ವೀಕೃತಿ 01.10.2020 ರಿಂದ 31.12.2020 | ಒಟ್ಟು | ತ್ರೈಮಾಸಿಕದಲ್ಲಿ ಇತ್ಯರ್ಥವಾದವು | ತ್ರೈಮಾಸಿಕದ ಅಂತ್ಯದಲ್ಲಿ (31.12.2020) ಇತ್ಯರ್ಥವಾಗದೇ ಉಳಿದವು |
|---|---|---|---|---|
| ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

ಟಿಪ್ಪಣಿ: 1) ಯೋಜನಾ ಕಾರ್ಯಪ್ರಗತಿಯು ತೃಪ್ತಿಕರವಾಗಿದೆ.

2) ಹೂಡಿಕೆದಾರರ ಕುಂದುಕೊರತೆಗಳನ್ನು ಕಂಪನಿ ಆಂತರಿಕವಾಗಿ ಹಾಗೂ ಕಂಪನಿ ನೇಮಿತ ನೋಂದಣಿ ಹಾಗೂ ವರ್ಗಾವಣೆ ಏಜೆಂಟರುಗಳು ಸ್ಪಂದಿಸುವರು.

ದಿನಾಂಕ :27.01.2021

ಸ್ಥಳ : ಬೆಂಗಳೂರು

ವ್ಯವಸ್ಥಾಪಕ ನಿರ್ದೇಶಕರು